ಅಸಲು ದಾವಾ ಸಂಖ್ಯೆ 548/2022

ಪಿ.ಡಬ್ಲ್ಯು:1

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ದಿನಾಂಕ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಎಮ್.ಎನ್. ಪ್ರತಿವಾದಿ ಪರ ವಕೀಲರಿಂದ**

ಮೃತ ವಾದಿ ದಾವೆ ಸಲ್ಲಿಸುವಾಗ ದಾವೆಯ ಮಾಹಿತಿಯನ್ನು ವಾದಿ ಶಾಂತಮ್ಮ ನೀಡಿದ್ದಾರೆ. ಸದರಿ ದಾವೆಯ ಮಾಹಿತಿಯನ್ನು ತಿಳಿದುಕೊಂಡಿದ್ದೇನೆ. ಪ್ರತಿವಾದಿಗಳು ದಾವಾ ಸ್ವತ್ತಿನ ಪಶ್ಚಿಮ ಭಾಗದ ವಿಸ್ತೀರ್ಣ 10x35 ಅಡಿಗಳ ಸ್ವಾಧೀನ ಹೊಂದಿದ್ದಾರೆ. ಸದರಿ ವಿಸ್ತೀರ್ಣ 10x35 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಲುಗ್ಯಾಭೋವಿ ಸ್ವತ್ತು ಇದೆ, ಪಶ್ಚಿಮಕ್ಕೇ ಕಮಲಮ್ಮ ರವರ ಮನೆ ಇದೆ, ಉತ್ತಕ್ಕೇ ರಸ್ತೆ ಇದೆ ಮತ್ತು ದಕ್ಷಿಣಕ್ಕೇ ರಸ್ತೆ ಇದೆ ಎಂದು ನುಡಿಯುತ್ತಾರೆ. ವಿಸ್ತೀರ್ಣ 10x35 ಅಡಿಗಳ ಸ್ವತ್ತು 1 ನೇ ಪ್ರತಿವಾದಿ ಹೆಸರಿಗಿದೆ. 1 ನೇ ಪ್ರತಿವಾದಿಯು ನಮ್ಮ ಸ್ವತ್ತಿನ ಪಶ್ಚಿಮಕ್ಕೆ ಇರುವುದಾಗಿ ಹೇಳಿದ್ದು, ಚೆಕ್ಕುಬಂದಿಯಲ್ಲಿ ಆ ರೀತಿ ಹೇಳಲು ತೊಂದರೆ ಇದಿಯಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ವಿಸ್ತೀರ್ಣ 10x35 ಅಡಿಗಳ ಪಶ್ಚಿಮ ಭಾಗಕ್ಕೆ ಕಮಲಮ್ಮ ರವರ ಸ್ವತ್ತು ಎಂದರೆ ಸರಿ. ಕಮಲಮ್ಮನವರ ಸ್ವತ್ತಿನ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಕಮಲಮ್ಮ ನವರ ಸ್ವತ್ತಿನ ವಿಸ್ತೀರ್ಣ ಮತ್ತು ಚೆಕ್ಕುಬಂದಿ ವಾದಿಗೆ ತಿಳಿದಿದ್ದು ಎಂದರೆ ಅವರಿಗೆ ಅರಳು-ಮರುಳು ಇತ್ತು ಎಂದು ನುಡಿಯುತ್ತಾರೆ.

ವಿಸ್ತೀರ್ಣ 10x35 ಅಡಿಗಳ ಸ್ವತ್ತನ್ನು 1 ನೇ ಪ್ರತಿವಾದಿಗೆ ಅವರ ಗಂಡ ರಂಗನಾಥ ಮೂಲಕ ಬಂದಿದೆ. ದಾವಾ ಸ್ವತ್ತು ಸಹ ರಂಗನಾಥ ರವರ ಸ್ವತ್ತು ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿ

ಮೃತ ರಂಗನಾಥರವರ ಹೆಂಡತಿಯರು. ಮೃತ ವಾದಿಗೆ ವಿಸ್ತೀರ್ಣ 10x35 ಅಡಿಗಳ ಸ್ವತ್ತನ್ನು ನೀಡಿದ್ದಾರೆ. ತಲಾ ವಿಸ್ತೀರ್ಣ 10x35 ಅಡಿಗಳ ಸ್ವತ್ತನ್ನು ವಾದಿಗೆ ಮತ್ತು 1 ನೇ ಪ್ರತಿವಾದಿಗೆ ಹೇಗೆ ನೀಡಿದ್ದಾರೆ ಎಂದರೆ ಸಾಕ್ಷಿಯು ವಾದಿ ಮತ್ತು 1 ನೇ ಪ್ರತಿವಾದಿ ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ನನ್ನ ಮಾವ ರಂಗನಾಥ ರವರು ಜೀವಿತಾವಧಿಯಲ್ಲೆಯೆ ವಾದಿ ಮತ್ತು 1 ನೇ ಪ್ರತಿವಾದಿಗೆ ತಲಾ ವಿಸ್ತೀರ್ಣ 10x35 ಅಡಿಗಳ ಸ್ವತ್ತನ್ನು ನೀಡಿದ್ದರು ಎಂದು ನುಡಿಯುತ್ತಾರೆ. ರಂಗನಾಥ ರವರು ಆ ರೀತಿ ಸ್ವತ್ತನ್ನು ಹಂಚಿಕೊಡುವ ಪೂರ್ವದಲ್ಲಿ ವಿಸ್ತೀರ್ಣ 20x35 ಅಡಿಗಳ ಸ್ವತ್ತನ್ನು ಹೊಂದಿದ್ದರು. ರಂಗನಾಥರವರಿಗೆ ವಿಸ್ತೀರ್ಣ 20x35 ಅಡಿಗಳ ಸ್ವತ್ತನ್ನು ಹೊಂದಿದ್ದರು ಎಂಬುವುದಕ್ಕೆ ದಾಖಲೆಗಳನ್ನು ನೋಡಿರುವುದಿಲ್ಲ. ತಲಾ ವಿಸ್ತೀರ್ಣ 20x35 ಅಡಿಗಳ ಸ್ವತ್ತಿಗೆ ವಾದಿ ಮತ್ತು 1 ನೇ ಪ್ರತಿವಾದಿ ಹೆಸರಿಗೆ ಖಾತೆ ಬಂದಿದೆ. 1987 ನೇ ಸಾಲಿನಲ್ಲಿ ವಿಸ್ತೀರ್ಣ 20x35 ಅಡಿಗಳ ಸ್ವತ್ತಿಗೆ ವಾದಿಯ ಹೆಸರಿನಲ್ಲಿ ಖಾತೆಯಾಗಿದೆ. ಸದರಿ ಖಾತೆಯನ್ನು ವಿಭಾಗದ ಮೇರೆಗೆ ಮಾಡಿದ್ದಾರೆ. ಖಾತೆ ಮಾಡಲು ನನ್ನ ಗಂಡ ಮಂಜುನಾಥ ರವರು ಅರ್ಜಿ ಸಲ್ಲಿಸಿದ್ದರು. ವಿಸ್ತೀರ್ಣ 20x35 ಅಡಿಗಳ ಸ್ವತ್ತು ವಿಭಾಗದ ಮೂಲಕ ನನ್ನ ತಾಯಿಗೆ ಬಂದಿದ್ದು, ಹಾಗಾಗಿ ವಿಭಾಗದ ಮೇರೆಗೆ ಖಾತೆ ಮಾಡುವಂತೆ ನನ್ನ ಗಂಡ ಅರ್ಜಿ ಸಲ್ಲಿಸಿದ್ದರು. ಖಾತೆ ಸಂಬಂಧ ವಂಶವೃಕ್ಷ ನೀಡಿದ್ದರು. 1 ರಿಂದ 3 ನೇ ಪ್ರತಿವಾದಿಗಳ ಹೆಸರನ್ನು ಅರ್ಜಿ ಸಲ್ಲಿಸುವಾಗ ನೀಡಲಿಲ್ಲ. ಖಾತೆ ಮಾಡುವ ಸಂದರ್ಭ ನನ್ನ ಮಾವ ರಂಗನಾಥ ಮೃತರಾಗಿದ್ದರು. ಖಾತೆ ಮಾಡುವ ಸಂದರ್ಭ 1 ರಿಂದ 3 ನೇ ಪ್ರತಿವಾದಿಗಳು ರಂಗನಾಥ ರವರ ವಾರಸುದಾರರು ಎಂದು ವಂಶವೃಕ್ಷದಲ್ಲಿ ತಿಳಿಸಲು ತೊಂದರೆ ಇತ್ತ ಎಂದರೆ ತಿಳಿಸಲಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ಮುಂದುವರೆದು ವಿಸ್ತೀರ್ಣ 20x30 ಅಡಿಗಳ ಸ್ವತ್ತಿಗೆ ಖಾತೆ ಮಾಡಲು ನನ್ನ ಗಂಡ ಅರ್ಜಿ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ವಿಸ್ತೀರ್ಣ 20x30 ಅಡಿಗಳ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿ ಮಕ್ಕಳಿಗೆ ಸಮಾನವಾದ ಭಾಗಾಂಶದ ಹಕ್ಕಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳಿಗೆ ಸದರಿ ಸ್ವತ್ತಿನಲ್ಲಿ ಭಾಗಾಂಶದ ಹಕ್ಕಿದ್ದರೂ ಸಹ ಅವರನ್ನು ಖಾತೆ ಸಂದರ್ಭ ನೀಡಿದ ವಂಶವೃಕ್ಷದಲ್ಲಿ ನಮೂದಿಸಿಲ್ಲ ಎಂದರೆ ಖಾತೆ ನಮೂದಾದ ನಂತರ ವಾದಿ ಮತ್ತು 1 ನೇ ಪ್ರತಿವಾದಿ ಅವರವರ ಸ್ವತ್ತಿನಲ್ಲಿ ಪ್ರತ್ಯೇಕವಾಗಿದ್ದಾರೆ ಎಂದು ನುಡಿಯುತ್ತಾರೆ. ವಿಸ್ತೀರ್ಣ 20x30 ಅಡಿಗಳ ಸ್ವತ್ತು ರಂಗನಾಥ ರವರ ಹೆಸರಿಗೆ ಇರಲಿಲ್ಲ. ಸಾಕ್ಷಿಯು ಸ್ವತಃ ಸದರಿ ಸ್ವತ್ತು ರಂಗನಾಥ ರವರ ತಂದೆಯಾದ ಸ್ವತ್ಪರವರ ಹೆಸರಿಗೆ ಇತ್ತು ಎಂದು ನುಡಿಯುತ್ತಾರೆ. ರಂಗನಾಥ ರವರ ಮರಣದ ಕಾಲಕ್ಕೆ ಅವರ ಹೆಸರಿನಲ್ಲಿ ವಿಸ್ತೀರ್ಣ 10x35 ಅಡಿಗಳ ಸ್ವತ್ತು ಇತ್ತು ಎಂದರೆ ಸರಿಯಲ್ಲ. ವಿಸ್ತೀರ್ಣ 10x35 ಅಡಿಗಳ ಪೈಕಿ ಪೂರ್ವ ಭಾಗಕ್ಕೆ ವಿಸ್ತೀರ್ಣ 10x17.½ ಅಡಿಗಳ ಸ್ವತ್ತು ವಾದಿಯ ಭಾಗಕ್ಕೆ ನೀಡಿದ್ದಾರೆ ಎಂದರೆ ಸರಿ. ಉಳಿಕೆ ವಿಸ್ತೀರ್ಣ 10x17.½ ಅಡಿಗಳ ಸ್ವತ್ತನ್ನು 1 ನೇ ಪ್ರತಿವಾದಿಯ ಹಿಸ್ಸೆಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ವಿಸ್ತೀರ್ಣ 10x35 ಅಡಿಗಳ ಸ್ವತ್ತು ರಂಗನಾಥ ರವರ ಹೆಸರಿನಲ್ಲಿರುವ ವಿಚಾರ ವಾದಿ ಮತ್ತು ನನಗೆ ತಿಳಿದಿತ್ತು ಎಂದರೆ ರಂಗನಾಥ ರವರ ಮರಣದ ಸಂದರ್ಭದಲ್ಲಿ ರಂಗನಾಥ ಹೆಸರಿನಲ್ಲಿ ಯಾವುದೆ ಆಸ್ತಿ ಇರಲಿಲ್ಲ ಎಂದು ನುಡಿಯುತ್ತಾರೆ. ವಿಸ್ತೀರ್ಣ 10x17.½ ಅಡಿಗಳ ಸ್ವತ್ತನ್ನು ವಾದಿಗೆ ಬಿಟ್ಟಿದ್ದು, ಆ ಸ್ವತ್ತಿನಲ್ಲಿ 1 ನೇ ಪ್ರತಿವಾದಿಗೆ ಯಾವುದೆ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿ. ವಿಸ್ತೀರ್ಣ 10x17.½ ಅಡಿಗಳ ಸ್ವತ್ತನ್ನು 1 ನೇ ಪ್ರತಿವಾದಿಗೆ ಬಿಟ್ಟಿದ್ದು, ಆ ಸ್ವತ್ತಿನಲ್ಲಿ ಮೃತ ವಾದಿಗೆ ಯಾವುದೆ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿ. ವಿಸ್ತೀರ್ಣ 10x17.½ ಅಡಿಗಳ

1 ನೇ ಪ್ರತಿವಾದಿಯ ಸ್ವತ್ತಿಗೆ ನಾವು ತೊಂದರೆ ನೀಡುತ್ತಿದ್ದೇವೆ ಎಂದು 1 ನೇ ಪ್ರತಿವಾದಿಯು ನಮ್ಮ ಮೇಲೆ ಇದೇ ನ್ಯಾಯಾಲಯದಲ್ಲಿ ಅ.ದಾ.ಸಂಖ್ಯೆ 532/2022 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನಾವು ತೊಂದರೆ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಾವು ಮೊದಲು ದಾವೆ ಸಲ್ಲಿಸಿದ ನಂತರ ಅವರು ದಾವೆ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ.

ರಂಗನಾಥ ರವರು ನೀಡಿರುವ ಪ್ರಕಾರ ವಾದಿ ಮತ್ತು ಚಂದ್ರಮ್ಮರವರು ಅವರವರ ಹಿಸ್ಸೆಯಲ್ಲಿ ಪ್ರತ್ಯೇಕವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಾವು 1 ನೇ ಪ್ರತಿವಾದಿಗೆ ನೀಡಿರುವ ಮತ್ತು ಸ್ವಾಧೀನದಲ್ಲಿರುವ ವಿಸ್ತೀರ್ಣ 10x17.½ ಅಡಿಗಳ ಸ್ವತ್ತನ್ನು ಸೇರಿಸಿ ವಾದಿಯ ಹೆಸರಿಗೆ ಖಾತೆ ಮಾಡಲು ಅರ್ಜಿ ನೀಡಿದ್ದೆವು ಎಂದರೆ ಸರಿ. ಆ ರೀತಿ ಪ್ರತಿವಾದಿಯ ಸ್ವತ್ತನ್ನು ಸೇರಿಸಿ ವಾದಿಯ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಅತ್ತೆಯ ಹೆಸರಿನಲ್ಲಿರುವ ಖಾತೆಯನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ಅವರ ಸ್ವತ್ತಿನ ಸಂಬಂಧ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಹಳೆಯ ಮನೆಯನ್ನು ಕೆಡವಿ ಹೊಸ ನಿರ್ಮಿಸಲು ಹೋದಾಗ ಪ್ರತಿವಾದಿಗಳು ತೊಂದರೆ ನೀಡಿದ್ದರು ಎಂದು ತಕರಾರು ಸಲ್ಲಿಸಿದ್ದೇನೆ. 1 ನೇ ಪ್ರತಿವಾದಿಯು ವಿಸ್ತೀರ್ಣ 10x17.½ ಅಡಿಗಳ ತನ್ನ ಸ್ವತ್ತನ್ನು ಸೇರಿಸಿ, ಖಾತೆ ಮಾಡಿಸಿಕೊಂಡಿದ್ದೀರಿ ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯ ಸ್ವತ್ತನ್ನು ಸೇರಿಸಿದ್ದು,

ಹಾಗಾಗಿ ಸಂಪೂರ್ಣ ದಾವಾ ಸ್ವತ್ತಿಗೆ ನಾವು ಹಕ್ಕುದಾರರು ಮತ್ತು ಸ್ವಾಧೀನದಾರರು ಅಲ್ಲ ಎಂದರೆ ಸರಿಯಲ್ಲ.

ಸರ್ಕಾರದ ಯೋಜನೆಯಡಿ ಮನೆ ನಿರ್ಮಿಸಲು ಹೋದಾಗ 1 ನೇ ಪ್ರತಿವಾದಿಯು ಸದರಿ ಸ್ವತ್ತಿನಲ್ಲಿ ತನಗೆ ಭಾಗಾಂಶವಿದೆ ಎಂದು ತಕರಾರು ಸಲ್ಲಿಸಿದ್ದರು. ನಾನು ದಾವಾ ಆಸ್ತಿಯ ಬಗ್ಗೆ ಮಾಹಿತಿ ಇಲ್ಲದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಸೇರಿಸಿ ನಾವು ಸ್ವಾಧೀನದಲ್ಲಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ–10 ಖಾತಾ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ನಿಪಿ–10 ರಲ್ಲಿರುವ ಸ್ವತ್ತು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿದೆ. ನಾನು ನುಡಿದಿರುವ ಪ್ರಕಾರ ಆ ರೀತಿ ಪೂರ್ವ ದಿಕ್ಕಿನಲ್ಲಿ 1 ನೇ ಪ್ರತಿವಾದಿಯ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ನಿಪಿ–10 ರಲ್ಲಿರುವ ಸ್ವತ್ತಿನ ಚೆಕ್ಕುಬಂದಿ ಗೊತ್ತಿಲ್ಲ. ನಿಪಿ–10 ರಲ್ಲಿರುವ ಸ್ವತ್ತಿನ ಸಂಖ್ಯೆ ಗೊತ್ತಿಲ್ಲ, ಆದರೆ ಅದರ ಅಳತೆ 10x35 ಇದೆ.

ನಿಪಿ–1 ಮತ್ತು ನಿಪಿ–10 ರಲ್ಲಿರುವ ಸ್ವತ್ತುಗಳನ್ನು ನ್ಯಾಯಾಲಯದ ಮೂಲಕ ಅಳತೆ ಮಾಡಿಸಲು ತೊಂದರೆ ಇಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ
Sd/– 11.06.26
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡೂರು